# ಇವಳು ನನ್ನ ತಾಯಿ

ಪ್ರೊ. ಎನ್. ಕೃಷ್ಣಸ್ವಾಮಿ

ಮಾತೃವಾತ್ಸಲ್ಯದ ಮೂರ್ತಸ್ವರೂಪರಾಗಿದ್ದರು ಶ್ರೀಮಾತೆಯವರು. ತಾಯಿಯ ಪ್ರೀತಿಯನ್ನು ಸವಿಯದ ಅನೇಕರ ಈ ಕೊರತೆಯನ್ನು ಅವರು ಹೇಗೆ ತುಂಬಿದರು ಎಂಬುದಕ್ಕೆ ನಿದರ್ಶನವಾಗಿ ಕೆಲವು ಸ್ವಾರಸ್ಯಕರ ಘಟನೆಗಳನ್ನು ಪ್ರಸ್ತುತಪಡಿಸಿರುವ ಶ್ರೀ ಕೃಷ್ಣಸ್ವಾಮಿಯವರು ಹಲವು ಗ್ರಂಥ ಮತ್ತು ಲೇಖನಗಳನ್ನು ಬರೆದಿರುವರು. ಅವರು ಬೆಂಗಳೂರಿನಲ್ಲಿ ವಿವೇಕಾನಂದ ಎಜುಕೇಷನ್ ಸೊಸೈಟಿ ಎಂಬ ಸಂಸ್ಥೆಯ ಉಪಾಧ್ಯಕ್ಷರಾಗಿದ್ದರೆ.

### ಶ್ರೀರಾಮಕೃಷ್ಣ

ಒಂದು ದಿನ ಶ್ರೀ ಶಾರದಾದೇವಿ ಪತಿಯ ಪಾದಗಳನ್ನು ಒತ್ತುತ್ತಿದ್ದರು. ಆಗ ಕೇಳಿದರು, "ನನ್ನನ್ನು ನೀವು ಹೇಗೆ ಕಾಣುತ್ತೀರಿ?" ಶ್ರೀರಾಮಕೃಷ್ಣರ ಉತ್ತರ, "ಯಾರು ದೇವಸ್ಥಾನದಲ್ಲಿ ಭವತಾರಿಣಿಯಾಗಿ ನಿಂತಿರುವಳೋ, ಯಾರು ಈ ಶರೀರಕ್ಕೆ ಜನ್ಮ ಕೊಟ್ಟು ನಹಬತ್ತಿನಲ್ಲಿ ವಾಸ ಮಾಡುತ್ತಿರುವಳೋ ಅವಳೇ ನನ್ನ ಕಾಲು ಒತ್ತುತ್ತಿದ್ದಾಳೆಂದು ನಾನು ತಿಳಿದಿದ್ದೇನೆ."

### ಸ್ವಾಮಿ ವಿವೇಕಾನಂದ

ಸ್ವಾಮೀಜಿ ಅಮೆರಿಕದಿಂದ ವಾಪಸಾದಾಗ ಶಾರದಾ ದೇವಿಯವರನ್ನು ಭೇಟಿ ಮಾಡಿದರು. ಆಗ ಶ್ರೀಮಾತೆಯವರು "ನರೇನ್, ನಿಮ್ಮ ತಾಯಿಯನ್ನು ಹೋಗಿ ನೋಡಿದೆಯಾ?" ಎಂದು ಕೇಳಿದರು. ಆಗ ಸ್ವಾಮೀಜಿ ಹೇಳಿದರು, "ನೀವೇ ನನಗಿರುವ ಏಕೈಕ ತಾಯಿ!"

### ಸ್ವಾಮಿ ಯತೀಶ್ವರಾನಂದ

ಸ್ವಾಮಿ ಯತೀಶ್ವರಾನಂದರು ಸುಮಾರು ಹದಿನಾರು ವರ್ಷಗಳು ಭಾರತ ಬಿಟ್ಟು ಪಾಶ್ಚಾತ್ಯ ದೇಶಗಳಲ್ಲಿ ವೇದಾಂತ ಪ್ರಚಾರ ಮಾಡಿದರು. ಆ ಕಾಲದಲ್ಲಿ ಒಂದು ದಿನ —ಅದು ಲಂಡನ್ನಿನಲ್ಲಿ ಎಂದು ನೆನಪು— ಅವರು ವ್ಯಾಪಾರ ಮಾಡಲು ಒಂದು ಅಂಗಡಿಗೆ ಹೋದಾಗ ಹಣ ಕೊಡಲು ತಮ್ಮ ಜೇಬಿನಿಂದ ಪರ್ಸ್ ತೆಗೆದರು. ಅದರಲ್ಲಿದ್ದ ಶ್ರೀಮಾತೆಯವರ ಭಾವಚಿತ್ರವನ್ನು ನೋಡಿ ಅಂಗಡಿ ಮಾಲೀಕ "ಇದು ಯಾರು, ನಿಮ್ಮ ತಾಯಿಯೇ?" ಎಂದು ಕೇಳಿದ. ಸ್ವಾಮಿಗಳು ನಗುತ್ತಾ ಹೇಳಿದರು : "ಹೌದು, ಈಕೆ ನನ್ನ ತಾಯಿ!" ಈ ಘಟನೆಯನ್ನು ಸ್ವಾಮಿಗಳು ಆಗಾಗ ನೆನಪಿಗೆ ತಂದುಕೊಂಡು ಸಂತೋಷ ಪಡುತ್ತಿದ್ದರು.

### ಶತರೂಪೇ ಶಾರದಾ

ಸುಮಾರು ಹದಿನೈದು ವರ್ಷದ ಹಿಂದಿನ ಮಾತು. ಕಲ್ಕತ್ತೆಯ ರಾಮಕೃಷ್ಣ ಮಿಷನ್ ಸಂಸ್ಕೃತಿ ಸಂಸ್ಥೆಗೆ ಒಬ್ಬ ರಿಕ್ಷಾ ಎಳೆಯುವವನು ಬಂದು ತನಗೆ ಒಂದು ಪುಸ್ತಕ ಬೇಕೆಂದ. ಯಾವ ಪುಸ್ತಕ ಎಂದರೆ



ಅವನಿಗೆ ತಿಳಿಯದು. ಅದರ ಹೊದಿಕೆಯ ಮೇಲೆ ಒಬ್ಬ ಹೆಂಗಸಿನ ಚಿತ್ರ ಇದೆ ಎಂದು ಮಾತ್ರ ಅವನಿಗೆ ಗೊತ್ತು. **ಶತರೂಪೇ ಶಾರದಾ** ಪುಸ್ತಕ ತೋರಿಸಿದಾಗ ಅವನು ಅದೇ ಪುಸ್ತಕ ತನಗೆ ಬೇಕೆಂದ. ಆ ಪುಸ್ತಕವನ್ನು ಎಲ್ಲಿ ನೋಡಿದ್ದೆ ಎಂದರೆ ತನ್ನ ರಿಕ್ಷಾದಲ್ಲಿ ಕುಳಿತಿದ್ದ ಹೆಂಗಸಿನ ಕೈಯ್ಯಲ್ಲಿ ಅದು ಇದ್ದಿತೆಂದೂ ಪುಸ್ತಕದ ಹೊದಿಕೆಯ ಮೇಲಿನ ಚಿತ್ರ ತನ್ನನ್ನು ಆಕರ್ಷಿಸಿತೆಂದೂ ಅವನು ಹೇಳಿದ. ಪುಸ್ತಕದ ಮಾರಾಟ ಕೇಂದ್ರದಲ್ಲಿದ್ದ ಸ್ವಾಮಿಗಳು ಅದಕ್ಕೆ ೬೦ ರೂಪಾಯಿ ಎಂದು ಹೇಳಿದರು. ರಿಕ್ಷಾ ಎಳೆಯುವವನ ಹತ್ತಿರ ಇದ್ದದ್ದು ಅಲ್ಲಿಯವರೆಗೆ ಅವನು ಸಂಪಾದಿಸಿದ್ದ ಹತ್ತು ರೂಪಾಯಿ ಮಾತ್ರ. ಸ್ವಾಮಿಗಳು ಕೇಳಿದರು, "ನಿನಗೆ ಓದಲು ಬರುತ್ತದೆಯೇ?" "ಇಲ್ಲ ಬಾಬು, ಆದರೆ, ನನ್ನ ಮಗ ಶಾಲೆಗೆ ಹೋಗುತ್ತಾನೆ. ಅವನಿಂದ ಓದಿಸಿ ಕೇಳುತ್ತೇನೆ." "ಈ ಚಿತ್ರ ಯಾರದು, ಅವರ ಹೆಸರೇನು ಗೊತ್ತೆ?" "ಗೊತ್ತಿಲ್ಲ, ಬಾಬು. ಆದರೆ ಆ ಹೆಂಗಸಿನ ಕೈಯ್ಯಲ್ಲಿ ಈ ಪುಸ್ತಕದ ಚಿತ್ರ ನೋಡಿದಾಗ ನನ್ನ ಹೃದಯವನ್ನು ಅದು ಸೂರೆಗೊಂಡಿದೆ. ಅದು ನನ್ನ ತಾಯಿಯ ಚಿತ್ರ ಎಂದು ನಂಬಿದ್ದೇನೆ. ಚಿಕ್ಕ ವಯಸ್ಸಿನಲ್ಲೇ ತಾಯಿಯನ್ನು ಕಳೆದುಕೊಂಡೆ. ಅವಳು ಹೇಗಿದ್ದಳೋ ನೆನಪಿಲ್ಲ. ಆದರೆ ಈಗ ಈ ಚಿತ್ರ ನೋಡಿ ಈಕೆಯೇ ನನ್ನ ತಾಯಿ ಎಂದು ನನಗೆ ಅನ್ನಿಸುತ್ತಿದೆ" ಎಂದು ಗದ್ಗದಿತನಾಗಿ ಹೇಳಿದನು. ಸ್ವಾಮಿಗಳು ಅವನಿಗೆ ಆ ಪುಸ್ತಕವನ್ನು ಉಚಿತವಾಗಿ ಕೊಟ್ಟರು.

## ಬಾಂಗ್ಲಾದೇಶದಲ್ಲಿ

೧೯೭೨ರಲ್ಲಿ ಸ್ವಾಮಿ ಲೋಕೇಶ್ವರಾನಂದರು ಸಂತ್ರಸ್ತ ಜನರ ಸೇವೆಯ ಕೆಲಸಕ್ಕಾಗಿ ಬಾಂಗ್ಲಾದೇಶಕ್ಕೆ ಹೋಗಿದ್ದರು. ಒಂದು ದಿನ ಢಾಕಾದಿಂದ ಜೆಸ್ಸೋರಿಗೆ ಜೀಪ್‌ನಲ್ಲಿ ಪ್ರಯಾಣಿಸುತ್ತಿದ್ದರು. ದಾರಿಯಲ್ಲಿ ಬಾಯಾರಿಕೆ ನಿವಾರಿಸಿಕೊಳ್ಳಲು ರಸ್ತೆ ಪಕ್ಕದ ಒಂದು ಚಾ ಅಂಗಡಿಗೆ ಹೋದರು. ಅಂಗಡಿ ಒಬ್ಬ ಮುಸ್ಲಿಮನದು. ಚಾ ಕುಡಿಯುವಾಗ ಅಲ್ಲಿದ್ದ ಒಂದೇ ಚಿತ್ರ ಅವರನ್ನು ಆಕರ್ಷಿಸಿತು. ಅದು ಶ್ರೀಶಾರದಾ ಮಾತೆಯವರ ಚಿತ್ರ. ಅಂಗಡಿಯಾತನನ್ನು ಸ್ವಾಮಿಗಳು ಕೇಳಿದರು:

"ಈ ಚಿತ್ರ ಯಾರದು ಗೊತ್ತೆ?"

"ಗೊತ್ತಿಲ್ಲ."

"ಮತ್ತೆ ಏಕೆ ಈ ಚಿತ್ರ ಇಟ್ಟುಕೊಂಡಿದ್ದೀಯೆ?"

"ನಾನು ನಾಲ್ಕು ವರ್ಷದವನಾಗಿದ್ದಾಗ ನನ್ನ ತಾಯಿ ಸತ್ತು ಹೋದಳು. ಅವಳು ಹೇಗಿದ್ದಳೋ ನನಗೆ ನೆನಪಿಲ್ಲ. ಬೇರೆ ಮಕ್ಕಳು ತಮ್ಮ ತಾಯಿಯರ ಪ್ರೀತಿ-ಆದರದ ವಿಚಾರ ಮಾತನಾಡಿದರೆ ನನಗೆ ದುಃಖವಾಗುತ್ತಿತ್ತು. ನಾನು ಸತ್ತುಹೋದ ತಾಯಿಯ ಚಿತ್ರವನ್ನು ನನ್ನ ಮನಸ್ಸಿನಲ್ಲಿ ಕಲ್ಪಿಸಿಕೊಳ್ಳುತ್ತಿದ್ದೆ. ಕನಸುಗಳಲ್ಲಿ ಅವಳು ಬಂದು ನನ್ನನ್ನು ಸಾಂತ್ವನಗೊಳಿಸುತ್ತಿದ್ದಳು. ಒಂದು ದಿನ ಒಂದು ಕ್ಯಾಲೆಂಡರಿನಲ್ಲಿ ಈ ಚಿತ್ರ ನೋಡಿದೆ. ಅದನ್ನು ನೋಡಿದೊಡನೆ ಇವಳೇ ನನ್ನ ಕನಸಿನ ತಾಯಿ ಎಂದು ನನಗೆ ಖಾತರಿ ಆಯಿತು. ಆ ಚಿತ್ರವನ್ನು ಕಟ್ಟುಹಾಕಿಸಿ ಇಟ್ಟುಕೊಂಡಿದ್ದೇನೆ. ಈ ಚಿತ್ರ ನೋಡಿದಾಗಲೆಲ್ಲ ನನ್ನ ತಾಯಿಯ ನೆನಪಾಗುತ್ತದೆ."

## ಹಾಲಿವುಡ್ಡಿನಲ್ಲಿ

೧೯೭೨ರಲ್ಲಿ ಲಾಸ್ ಏಂಜಲೀಸ್‌ನ ವೇದಾಂತ ಸಂಘಕ್ಕೆ ಒಬ್ಬ ಅಮೇರಿಕನ್ ಯುವತಿ ಬಂದಳು. ಸ್ವಾಮಿ ಪ್ರಭವಾನಂದರು ಹೊರಗೆ ಹೋಗಿದ್ದುದರಿಂದ ಆಕೆ ಸ್ವಾಮಿ ಅಸಕ್ತಾನಂದರನ್ನೇ ನೋಡ ಬಯಸಿದಳು. ಅತಿಥಿಗಳನ್ನು ಭೇಟಿಯಾಗುವ ಕಕ್ಷೆಗೆ ಬಂದಾಗ ಆ ಯುವತಿ ಅಲ್ಲಿದ್ದ ಶಾರದಾದೇವಿಯವರ ಚಿತ್ರವನ್ನು ನೋಡುತ್ತಾ ಅಳುತ್ತಿದ್ದಳು. ಅಳುತ್ತಲೇ ಕೇಳಿದಳು, "ಇದು ಯಾರು? ಈಕೆಗಾಗಿ ನಾನು ಅಮೆರಿಕದಲ್ಲೆಲ್ಲಾ ಹುಡುಕುತ್ತಿದ್ದೆ."

"ಯಾಕೆ? ಆಕೆಗಾಗಿ ಹುಡುಕಲು ಕಾರಣ ಏನು?"

"ಈಕೆ ನನ್ನ ಕನಸುಗಳಲ್ಲಿ ಬರುತ್ತಾಳೆ. ನನ್ನ ಮಕ್ಕಳ ಹತ್ತಿರ ಹೋಗು ಎಂದು ಹೇಳುತ್ತಾಳೆ. ಆಕೆಯ ಕಣ್ಣಿನಲ್ಲಿ ಎಂಥ ಆಕರ್ಷಣೆ! ಆಕೆಯನ್ನೂ ಆಕೆಯ ಮಕ್ಕಳನ್ನೂ ಹುಡುಕುತ್ತಾ ಅಮೆರಿಕದಲ್ಲೆಲ್ಲಾ ಅಲೆದೆ. ಕೊನೆಗೆ ಒಬ್ಬರು ಇಲ್ಲಿಯ ವಿಳಾಸವನ್ನು ಕೊಟ್ಟರು. ಇಂದು ಎಂತಹ ಆನಂದದ ದಿನ. ಈಕೆ ಯಾರು ನನಗೆ ಹೇಳಿ!"

**ಆಕೆ ಜಗತ್ತಿನ ಜನರಿಗೆಲ್ಲ ತಾಯಿ.**

## ಶ್ರೀಶಾರದಾದೇವೀ - ಚರಮಸಂದೇಶಃ

ಮಾ ಭೀಸ್ತ್ವಂ ದುಹಿತಃ ಕೃಪಾ ಹ್ಯಧಿಗತಾ
ಶ್ರೀರಾಮಕೃಷ್ಣಸ್ಯ ಸಾ,
ಶಾಂತೀಚ್ಛಾ ಯದಿ ತೇ ಕದಾಽಪಿ
ಪರದೋಷಾನ್ವೇಷಣಂ ಮಾ ಕುರು |
ಶ್ರೇಯೋಽರ್ಥಂ ಕುರು ತೇ
ಸುಪುತ್ರಿ ಸತತಂ ತ್ವದ್ದೋಷಸಂಮಾರ್ಗಣಂ
ಯಸ್ಮಾತ್ಸರ್ವಜನಸ್ತ್ವೈವ ಭುವನಂ
ಸ್ವೈಜಾಯಿತವ್ಯಂ ಮುದಾ ||

"ಮಗಳೆ! ನೀನು ಹೆದರಬೇಡ; ಏಕೆಂದರೆ ಶ್ರೀ ರಾಮಕೃಷ್ಣರ ಕೃಪೆಯನ್ನು ಪಡೆದಿರುವೆ! ನಿನಗೆ ಶಾಂತಿಯನ್ನು ಪಡೆಯಬೇಕೆಂಬ ಇಚ್ಛೆಯಿದ್ದರೆ ಎಂದಿಗೂ ಇತರರಲ್ಲಿ ತಪ್ಪನ್ನು ಕಂಡುಹಿಡಿಯಬೇಡ! ಸುಪುತ್ರಿ! ನಿನ್ನ ಶ್ರೇಯಸ್ಸಿನ ದೃಷ್ಟಿಯಿಂದಲೇ ನೀನು ಸತತವೂ ನಿನ್ನ ದೋಷಗಳನ್ನೇ ಕಂಡುಹಿಡಿ; ಏಕೆಂದರೆ ಎಲ್ಲರೂ ನಿನ್ನವರೇ! ಈ ಪ್ರಪಂಚವನ್ನು ಸಂತೋಷದಿಂದ ನಿನ್ನದನ್ನಾಗಿ ಮಾಡಿಕೊಳ್ಳಬೇಕು."

**(ಈ ಚರಮಸಂದೇಶವನ್ನು ಸಂಸ್ಕೃತ ಶ್ಲೋಕರೂಪಕ್ಕೆ ಪರಿವರ್ತಿಸಿದವರು ಸ್ವಾಮಿ ಹರ್ಷಾನಂದರು)**

ಶ್ರೀಮಾತೆಯ ಮಹಾಸಮಾಧಿಗೆ ಮುನ್ನ ಕೇವಲ ಐದು ದಿನಗಳಿರುವಾಗ "ಅನ್ನಪೂರ್ಣೆಯ ತಾಯಿ" ಎಂದು ಕರೆಯಲ್ಪಡುತ್ತಿದ್ದ ಭಕ್ತೆಯೊಬ್ಬಳು ಅವರ ದರ್ಶನಕ್ಕಾಗಿ ಬಂದಳು. ಆದರೆ ಹೊರಗಿನವರಾರಿಗೂ ಪ್ರವೇಶವಿಲ್ಲದ್ದರಿಂದ ಬಾಗಿಲಿಂದಾಚೆ ನಿಂತಿದ್ದಳು. ಅದೇ ಸಮಯದಲ್ಲಿ ಶ್ರೀಮಾತೆಯವರು ಪಕ್ಕಕ್ಕೆ ಹೊರಳುವಾಗ ಆಕೆಯನ್ನು ನೋಡಿ ಒಳಬರಲು ಸನ್ನೆ ಮಾಡಿದರು. ಆಕೆ ಪ್ರವೇಶಿಸಿ ಗದ್ಗದಕಂಠಳಾಗಿ, "ತಾಯಿ! ಇನ್ನು ನಮ್ಮ ಗತಿ ಯೇನು?" ಎಂದು ನುಡಿದಳು. ಬಹು ಪ್ರೀತಿಯಿಂದ, ಆದರೆ ಕ್ಷೀಣ ಸ್ವರದಿಂದ ಶ್ರೀಮಾತೆಯವರೆಂದರು, "ಭಯವೇಕೆ? ನೀನು ಶ್ರೀ ಠಾಕೂರರನ್ನು ನೋಡಿರುವೆ. ಮತ್ತೇಕೆ ಭಯ?" ಸ್ವಲ್ಪ ತಡೆದು ಮತ್ತೆ ನಿಧಾನವಾಗಿ ಮೃದುವಾಗಿ ನುಡಿದರು: "ಆದರೆ, ನಿನಗೊಂದು ಮಾತನ್ನು ಹೇಳುವೆ. ನಿನಗೆ ಶಾಂತಿ ಬೇಕಿದ್ದಲ್ಲಿ, ಮಗು, ಇತರರಲ್ಲಿ ತಪ್ಪನ್ನು ಕಂಡುಹಿಡಿಯಬೇಡ. ಬದಲು, ನಿನ್ನಲ್ಲಿಯೇ ಇರುವ ದೋಷಗಳನ್ನು ನೋಡು. ಈ ಜಗತ್ತಿನಲ್ಲಿ ಯಾರೂ ಪರಕೀಯರಲ್ಲಮ್ಮ! ಜಗತ್ತನ್ನು ನಿನ್ನದನ್ನಾಗಿ ಮಾಡಲು ಕಲಿ."

—ಅನುವಾದ **(ಆಂಗ್ಲಮೂಲ : *Holy Mother Sri Sarada Devi* by Swami Gambhirananda, p.519)**